

ಭಾರತ್ ಗೋಲ್ಡ್ ಮೈನ್ಸ್ ಕಂಪನಿಯ ಕೆಲಸಗಾರರ ಕಾಲನಿ ಹೀಗಿತ್ತು

# ಚಿನ್ನದ ಬೇಟೆ

ಮಾಡಲು ಬಿಳಿಯರು ಹಿಂದೆ ಮುಂದೆ ನೋಡಲಿಲ್ಲ. ಆಗ ಆದ ಸಾವುನೋವುಗಳಿಗೆ ಲೆಕ್ಕವಿಲ್ಲ.

ಉಕ್ಕಿನ ಹಗ್ಗಗಳಲ್ಲಿ ಹಿಡಿದಿಟ್ಟ ಪಂಜರಗಳಲ್ಲಿ ಗಣಿಗಾರರು ದಿನ ನಿತ್ಯ ಒಳಕ್ಕೆ ಇಳಿಯಬೇಕಿತ್ತು. ನೆಲದೊಳಗಿನ ಪದರುಗಳನ್ನು ಅಗೆದು ಬಗೆದು ಚಿನ್ನದ ಅಂಶಗಳಿರುವ ಅದಿರನ್ನು ಮೇಲಕ್ಕೆ ಸಾಗಿಸಬೇಕಿತ್ತು. ಇದಕ್ಕಾಗಿ ಎಲ್ಲ ಗಣಿಗಳಲ್ಲೂ ರಾಟೆಗಳಿದ್ದವು. ರಾಟೆಗಳ ಮೂಲಕ ಉಕ್ಕಿನ ಪಂಜರ ಇಳಿಸಲು ಗಾಣದಂತೆ ಎತ್ತುಗಳು ಮತ್ತು ಕುದುರೆಗಳು ಬಳಕೆಯಾಗುತ್ತಿದ್ದವು. ಅದು ಬಹುನಿಧಾನ ಹಾಗೂ ಅಪಾರ ಶ್ರಮ ಬೇಡುವ ಕೆಲಸವಾಗಿತ್ತು. ಸಂಪತ್ತು ತಮ್ಮದಾಗಿಸಿಕೊಳ್ಳಲು ಬ್ರಿಟಿಷರು ಆಧುನಿಕ ಹಾಗೂ ಸುಧಾರಿತ ಯಂತ್ರೋಪಕರಣಗಳನ್ನು ಗಣಿ ಪ್ರದೇಶಕ್ಕೆ ತಂದರು. ಕೆಲಸದ ವೇಗ ಹೆಚ್ಚಿಸಲು ಹಾಗೂ ಕೆಲಸ ಸುಲಭ ಮಾಡಿಕೊಳ್ಳಲು ಜಲ ವಿದ್ಯುತ್ ಉತ್ಪಾದನೆಯನ್ನೂ ಶುರು ಮಾಡಿದರು. ಶಿಂಸಾದಲ್ಲಿ ಉತ್ಪಾದನೆಯಾದ ವಿದ್ಯುತ್ ಕೆ.ಜಿ. ಎಫ್. ಗಣಿಗಳಿಗಾಗಿಯೇ ಮೀಸಲಾಯಿತು. ಐಷಾರಾಮಿ ಬಂಗಲೆಗಳನ್ನು ಕಟ್ಟಿಕೊಂಡ ಬಿಳಿಯ ಅಧಿಕಾರಿಗಳು ವೈಭವೋಪೇತ ಬದುಕಿಗೆ ಏನೆಲ್ಲ ಬೇಕೋ ಅವನ್ನೆಲ್ಲ ವ್ಯವಸ್ಥೆ ಮಾಡಿಕೊಂಡರು. ಗಾಲ್ಫ್ ಕ್ಲಬ್, ಡಾನ್ಸ್ ಹಾಲ್, ಮೋಟಾರು ವಾಹನಗಳು, ವಿದ್ಯಾಸಂಸ್ಥೆಗಳು ತಲೆಯೆತ್ತಿದವು. ತಮ್ಮ ದೇಶದ ವಾತಾವರಣವನ್ನೇ ರೂಪಿಸಿಕೊಂಡ ಬಿಳಿಯರು ಕೆ.ಜಿ.ಎಫ್. ಅನ್ನು 'ಲಿಟಲ್ ಇಂಗ್ಲೆಂಡ್' ಎಂದು ಕರೆದರು. ಅದು ವಾಸ್ತವದ ಸಂಗತಿಯೂ ಹೌದು.

'ಒಳಗೆ ಹೋದರೆ ಹೆಣ – ಹೊರಗೆ ಬಂದರೆ ಹಣ' – ಇದು ಗಣಿ ಕಾರ್ಮಿಕರು ಪ್ರತಿಬಾರಿ ಗಣಿಯೊಳಕ್ಕೆ ಇಳಿಯುವುದು ಹಾಗೂ ಹೊರಬರುವ ಪ್ರಕ್ರಿಯೆ ಬಗ್ಗೆ ಹುಟ್ಟಿಕೊಂಡ ಮಾತು. ಪ್ರಾಣವನ್ನೇ ಪಣವಾಗಿಟ್ಟು ಚಿನ್ನದ ಅದಿರು ಹೆಕ್ಕಿ ತರುವ ಕಾರ್ಮಿಕರಿಗೆ ಕನಿಷ್ಠ ಸೌಲಭ್ಯಗಳನ್ನು ಬ್ರಿಟಿಷ್ ಕಂಪನಿಗಳು ಮಾಡಲೇ ಇಲ್ಲ. ಬಿದಿರು ತಡಿಕೆಗಳ ಪುಟ್ಟ ಗುಡಿಸಲುಗಳೇ ಅವರ ಮನೆಗಳು. ಗಾಳಿ ಬೆಳಕು ಬರದ ಆ ಗುಡಿಸಲುಗಳಲ್ಲೇ ಕಾರ್ಮಿಕರ ಬದುಕು. ಸಾವಿರಾರು ಗಣಿ ಕಾರ್ಮಿಕರಿಗೆ ನೂರಾರು ಬಿದಿರು ಗುಡಿಸಲು ಕೊಟ್ಟ ಬಿಳಿಯರು ತಮ್ಮ ಸೌಲಭ್ಯಕ್ಕಾಗಿ 10 ಕಿ.ಮೀ. ದೂರದ ಬೇತಮಂಗಲ ಕೆರೆಯಿಂದ ಕುಡಿಯುವ ನೀರಿನ ಸರಬರಾಜು ಮಾಡಿಕೊಂಡರು. ನೂರು ಗುಡಿಸಲುಗಳಿಗೆ ಒಂದೋ ಎರಡೋ ನಲ್ಲಿ ಕೊಟ್ಟರು. ಶೌಚಾಲಯಗಳ ವ್ಯವಸ್ಥೆಯನ್ನೇ ಮಾಡುವ ಗೋಜಿಗೆ ಹೋಗಲಿಲ್ಲ. ಸದಾ ಗಣಿಯೊಳಗೆ ಉಸಿರಾಡಬೇಕಿದ್ದ ಕಾರ್ಮಿಕರಿಗೆ ಅನೇಕ ಕಾಯಿಲೆಗಳು ಕಾಡತೊಡಗಿದವು. ಎದೆಗೂಡು ತೂತು ಬೀಳುವ 'ಸಿಲಿಕಾಸಸ್'ನಂತಹ ಮಾರಣಾಂತಿಕ ರೋಗ ಹೆಚ್ಚು ಇದ್ದಿದ್ದೇ ಕೆ.ಜಿ. ಎಫ್. ಗಣಿಗಳಲ್ಲಿ. ಗಣಿಯೊಳಗೆ ನಡೆವ ಶಿಲಾ ಸ್ಫೋಟಗಳಿಗೆ ಬಲಿಯಾದವರ ಲೆಕ್ಕವಿಲ್ಲ. ಸ್ಫೋಟ ಸಂಭವಿಸಿದಾಗ ಕಲ್ಲು ಮಣ್ಣಿನ ಜೊತೆ ಹೂತು ಹೋದವರನ್ನು ಲೆಕ್ಕ ಇಡುವುದಾದರೂ ಹೇಗೆ?

ಗರಿಷ್ಠ ಕಾರ್ಯನಿರ್ವಹಿಸುತ್ತಿದ್ದ ಗಣಿ



ಚಿನ್ನದ ಗಣಿಗಾರಿಕೆಯನ್ನು ಚಿತ್ರಿಸುವ 120 ವರ್ಷ ಹಳೆಯ ಛಾಯಾಚಿತ್ರ

